**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು**

**ಓ.ಎಸ್.ನಂ.302/2019**

**ದಿನಾಂಕಃ03.01.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯುಃ1

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಕೆ.ಎನ್.ಆರ್. ವಕೀಲರಿಂದಃ-**

ನಾನು ವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ, ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ಮುಖ್ಯ ವಿಚಾರಣೆಯೊಂದಿಗೆ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-1 ಮತ್ತು 2 ಎಂದು, ಮ್ಯುಟೇಶನ್ ರಿಜಿಸ್ಟರಿನ ಪ್ರತಿಗಳನ್ನು ನಿಪಿ-3 ಮತ್ತು 4 ಎಂದು, ಅಟ್ಲಾಸ್ ನ ದೃಢೀಕೃತ ಪ್ರತಿಯನ್ನು ನಿಪಿ-5 ಎಂದು, ಆಕಾರ ಬಂದನ್ನು ನಿಪಿ-6 ಎಂದು, ನೋಟೀಸಿನ ಕಛೇರಿಪ್ರತಿಯನ್ನು ನಿಪಿ-7, ಅಂಚೆ ಸ್ವೀಕೃತಿಗಳನ್ನು ನಿಪಿ-8 ಮತ್ತು ನಿಪಿ-9 ಎಂದು, 2 ನೇ ಪ್ರತಿವಾದಿಗೆ ಕಳುಹಿಸಿದ ನೋಟೀಸು ಜಾರಿಯಾಗದೇ ವಾಪಸ್ಸು ಬಂದ ಮುಚ್ಚಿದ ಅಂಚೆ ಲಕೋಟೆಯನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ತೆರೆಯಲಾಗಿದ್ದು, ಅದರಲ್ಲಿದ್ದ ನೋಟೀಸಿನ ಪ್ರತಿಯನ್ನು ನಿಪಿ-10 ಎಂದು, ಅಂಚೆ ಲಕೋಟೆಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆ ಸಮಯ ಕೋರಿದ್ದು ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.